**<u>ದಿನಾಂಕಃ 02-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ.ಕೆ ವಕೀಲರಿಂದಃ</u>**

**04.** ಗುಂಡಾಚಾರಿ ಸುರಪುರದಲ್ಲಿ ತೀರಿಕೊಂಡಿರುತ್ತಾರೆ. ಶ್ರೀನಿವಾಸಚಾರಿ ಎಲ್ಲಿ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ, ಆಗ ನನಗೆ ಮದುವೆ ಆಗಿರುವುದಿಲ್ಲ. ನನ್ನ ತವರು ಮನೆ ಹೈದರಾಬಾದನ ಅನಂತಪುರಲ್ಲಿ ಇರುತ್ತದೆ. ಗುಂಡಾಚಾರಿಯ ಹೆಂಡತಿಯ ಹೆಸರು ಅಂಬುಜಾ ಎಂದು ಇರುತ್ತದೆ. ಸಾಕ್ಷಿ ಮುಂದುವರೆದು ನನ್ನ ಅತ್ತೆ ಇರುತ್ತಾರೆ ಎಂದು ನುಡಿಯುತ್ತಾರೆ. ಸುರಪುರದಲ್ಲಿ ಗುಂಡಾಚಾರಿ ಸ್ವಂತ ಮನೆ ಇತ್ತು. ಗುಂಡಾಚಾರಿ 1963-64 ರಲ್ಲಿ ತೀರಿಕೊಂಡಿರಬಹುದು. ನಾನು ಶ್ರೀನಿವಾಸಚಾರಿಯನ್ನು ನೋಡಿರುವುದಿಲ್ಲ, ಆಗ ನನ್ನ ಮದುವೆ ಆಗಿರುವುದಿಲ್ಲ.

**05.** ಈಗ ಗುಂಡಾಚಾರಿಯ ಮನೆ ಸುರಪುರದಲ್ಲಿ ಇರುವುದಿಲ್ಲ. ಈಗ ಸುರಪುರದಲ್ಲಿ ಗುಂಡಾಚಾರಿಯ ಮನೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಮನೆಯ ನಂಬರ ನನಗೆ ನೆನಪಿರುವುದಿಲ್ಲ, ಆದರೆ ಗೋಪಾಲಸಾಮಿ ಗುಡಿಯ ಹತ್ತಿರ ಇದ್ದಿತ್ತು. ಈ ಪ್ರಕರಣ ದಾಖಲಿಸುವುದಕ್ಕಿಂತ ಮುಂಚೆ ಸದರಿ ಮನೆ ಇತ್ತೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ನಗರಸಭೆಯಲ್ಲಿ ವಿಚಾರಿಸಿದ್ದೀರಾ ಎಂದರೆ ನಾನು ವಿಚಾರಿಸಿರುವುದಿಲ್ಲ, ಆದರೆ ಆಗ ಮನೆ ಇರಲಿಲ್ಲ ಎಂದು ನುಡಿಯುತ್ತಾರೆ. ಆಗ ಮನೆ ಇತ್ತು ಅಥವಾ ಇಲ್ಲವೋ ಎನ್ನುವುದರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಗುಂಡಾಚಾರಿ ಸುರಪುರದಲ್ಲಿ ತೀರಿಕೊಂಡಿರುವ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಗುಂಡಾಚಾರಿ ಎಲ್ಲಿ ತೀರಿಕೊಂಡಿರುತ್ತಾನೆ ಎನ್ನುವುದರ ಬಗ್ಗೆ ನನಗೆ ನೆನಪಿರುವುದಿಲ್ಲ. ಹೆಮ್ಮಡಗಿ ಗ್ರಾಮದಲ್ಲಿ ಮನೆ ಇರುತ್ತದೆ. ಸದರಿ ಮನೆ ಅಂಬುಜಾಮ್ಮ ಹೆಸರಿನಲ್ಲಿ ಇರುತ್ತದೆ. ಸದರಿ ಮನೆಯ ದಾಖಲೆಗಳನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಂಬುಜಮ್ಮ ರಾಮಾನುಜಂ ಮನೆಯಲ್ಲಿ ತೀರಿಕೊಂಡಿರುತ್ತಾಳೆ. ರಾಮಾನಜಂ ತಂದೆಯ ಹೆಸರು ನರಸಿಂಹಚಾರಿ ಇರುತ್ತದೆ. ಸದರಿಯವರ ಮನೆಯಲ್ಲಿ ಅಂಬುಜಮ್ಮ ತೀರಿಕೊಂಡಿರುತ್ತಾಳೆ. ರಾಮಾನಜಂ ಅವರ ಯಾವುದೇ ಕುಟುಂಬದವರು ಸುರಪುರದಲ್ಲಿ ಇರುವುದಿಲ್ಲ. ರಾಮಾನುಜಂ ಹೆಸರಿನಲ್ಲಿ ಇರುವ ಮನೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ದಾವಾ ಪ್ರತಿಯಲ್ಲಿ ಅಂಬುಜಮ್ಮ ರಾಮಾನುಜಂರವರ ಮನೆಯಲ್ಲಿ ತೀರಿಕೊಂಡಿರುತ್ತಾಳೆ ಎಂದು ಬರೆಸಿರುವುದಿಲ್ಲ. ರಾಮಾನುಜಂ ಎಲ್ಲಿ ತೀರಿಕೊಂಡಿರುತ್ತಾನೆ ನನಗೆ ಗೊತ್ತಿರುವುದಿಲ್ಲ. ಸದರಿಯವನು 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ. 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ ಎಂದು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ರಾಮಾನುಜಂ ಮನೆ ಈಗಲೂ ಇರುವುದಿಲ್ಲ, ಆತನು ಮಾರಾಟ ಮಾಡಿರುತ್ತಾನೆ. ಸದರಿ ಮನೆ ಮಾರಾಟ ಮಾಡಿ 10-12 ವರ್ಷಗಳು ಆಗಿರುಬಹುದು. ಸದರಿ ಮನೆಯನ್ನು ಯಾರಿಗೆ ಮಾರಾಟ ಮಾಡಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮನೆಯ ನಂಬರ ನನಗೆ ಗೊತ್ತಿರುವುದಿಲ್ಲ. ಅಂಬುಜಮ್ಮ ರಾಮಾನುಜಂ ಮನೆಯಲ್ಲಿ ತೀರಿಕೊಂಡಿರುತ್ತಾಳೆ ಎಂದು ನಗರಸಭೆಗೆ ಅರ್ಜಿ ಕೊಟ್ಟಿರುತ್ತಾನೆ. ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸದರಿ ಅರ್ಜಿಗೆ ನಾವಿಬ್ಬರೂ ಸಹಿ ಮಾಡಿರುತ್ತೇವೆ. ಸದರಿ ಮರಣ ಪ್ರಮಾಣ ಪತ್ರದಲ್ಲಿ ರಾಮಾನುಜಂ ನಮ್ಮ ಮನೆಯಲ್ಲಿ ತೀರಿಕೊಂಡಿರುತ್ತಾನೆ ಎಂದು ನಾವು ಬರೆಸಿರುವ ಬಗ್ಗೆ ನನಗೆ ನೆನಪಿಲ್ಲ.

**06.** ನನ್ನ ಗಂಡ ಹೈದರಾಬಾದನಲ್ಲಿ ತೀರಿಕೊಂಡಿರುತ್ತಾನೆ. ಶಶಿಧರ ಈತನು ಸಹ ಹೈದರಾಬಾದನಲ್ಲಿ ತೀರಿಕೊಂಡಿರುತ್ತಾನೆ. ಸುರಪುರದಲ್ಲಿ ಗುಂಡಾಚಾರಿ ಮತ್ತು ಶ್ರೀನಿವಾಸಚಾರಿಯ ಮನೆಯೇ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈಗ ಇಲ್ಲ ಎಂದು ನುಡಿಯುತ್ತಾರೆ.

ಸದರಿಯವರ ಮನೆ ಆಗಲೂ ಇಲ್ಲ ಈಗಲೂ ಸಹ ಇಲ್ಲ ಎಂದರೆ ಸರಿಯಲ್ಲ. ಅಂಬುಜಮ್ಮ ಸುರಪುರದಲ್ಲಿ ತೀರಿಕೊಂಡಿರುವುದಿಲ್ಲ, ಹೈದರಾಬಾದನಲ್ಲಿ ತೀರಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಗುಂಡಾಚಾರಿ, ಶ್ರೀನಿವಾಸಚಾರಿ, ಅಂಬುಜಮ್ಮ, ಮುರಳಿಧರ ಮತ್ತು ಶಶಿಧರ ಇವರು ಎಲ್ಲರೂ ಹೈದರಬಾದನಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮುರಳಿಧರ ಮತ್ತು ಶಶಿಧರ ಹೈದರಾಬಾದನಲ್ಲಿ ತೀರಿಕೊಂಡಿರುತ್ತಾರೆ ಮತ್ತು ಅಂಬುಜಮ್ಮ ಸುರಪುರದಲ್ಲಿ ತೀರಿಕೊಂಡಿರುತ್ತಾಳೆ ಎಂದು ನುಡಿಯುತ್ತಾರೆ. ಅಂಬುಜಮ್ಮ ಸುರಪುರದಲ್ಲಿ ತೀರಿಕೊಂಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಮ್ಮಡಗಿ ಗ್ರಾಮದಲ್ಲಿ ಸಹ ಮನೆ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇನ್ನೊಬ್ಬರುರಾದ ರಾಮಪ್ಪ ನಾಯಕ ಸೇರಿ ಮರಣ ಪ್ರಮಾಣ ಪತ್ರ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-22 ಮತ್ತು ಮರಣಪ್ರಮಾಣ ಪತ್ರ ಎರಡೂ ಸಹ ಜಾಲ್ತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ರಾಮಪ್ಪ ನಾಯಕ ರಾಜಕಾರಣಿ ಇರುವುದರಿಂದ ಸದರಿ ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**07.** ನಾನು ಪ್ರತಿವಾದಿಯರಾದ ವೆಂಕಟರಾವ್ ಮತ್ತು ಪಜ್ವಲ ಇವರ ಮೇಲೆ ದಾವೆ ಮಾಡಿರುತ್ತೇನೆ. 1 ನೇ ಪ್ರತಿವಾದಿಯನ್ನು ನಾನು ನೋಡಿರುತ್ತೇನೆ, ಆದರೆ ಎಷ್ಟು ವರ್ಷಗಳ ಹಿಂದೆ ನೋಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಸದರಿಯವನನ್ನು ಯಾವಾಗಲೋ ಒಂದು ಸಾರಿ ನೋಡಿರುತ್ತೇನೆ. 1 ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ನೆನಪಿರುವುದಿಲ್ಲ. ಸದರಿಯವರ ವಯಸ್ಸು 60-65 ವರ್ಷ ಇರಬಹುದು. 1 ನೇ ಪ್ರತಿವಾದಿಗೆ ಈಗ 70 ವರ್ಷ ಇರುತ್ತದೆ ಎಂದರೆ ಇರಬಹುದು. 1 ನೇ ಪ್ರತಿವಾದಿಯ ಊರು ಸಿಂಧನೂರು ಇರುತ್ತದೆ.

**08.** 1963-64 ರಿಂದ 2002-03 ರವರಗೆ ಪಹಣಿಗಳಲ್ಲಿ ಅಂಬುಜಮ್ಮ ಕಬ್ಜೆಯಲ್ಲಿ

ಇಲ್ಲ ಎಂದು ತೋರಿಸುತ್ತವೆ ಎಂದರೆ ನನಗೆ ನೆನಪಿರುವುದಿಲ್ಲ. ಸದರಿ ಅವಧಿಯಲ್ಲಿ ಅಂಬುಜಮ್ಮನ ಹೆಸರು ಕಬ್ಜಾ ಕಲಂನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-2 ನ್ನು ತೋರಿಸಿ ಕೇಳಲಾಗಿ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. 2001-02 ಮತ್ತು 2002-03 ರಲ್ಲಿಯೂ ಸಹಿತ ಅಂಮಜಮ್ಮ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನಾನು ಹಾಜರುಪಡಿಸಿದ ದಾಖಲೆಗಳು ಓದಲು ಬರುವುದಿಲ್ಲ. ದಾವೆ ದಾಖಲಿಸುವ ಪೂರ್ವದಲ್ಲಿ ಸದರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ-7 ಕಾರ್ಯರೂಪಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರ ಪ್ರಕಾರ ಕಬ್ಜಾ ಕಾಲಂನಲ್ಲಿ ಅಂಬುಜಮ್ಮನ ಹೆಸರು ಬರಲಿಲ್ಲ ಎಂದರೆ ಸರಿಯಲ್ಲ. ಅಂಬುಜಮ್ಮ ಕಬ್ಜದಲ್ಲಿ ಇರದೇ ಇರುವುದರಿಂದ ಸದರಿಯವಳ ಹೆಸರು ಮುಟೇಷನ ಪ್ರಕಾರ ಕಬ್ಜ ಕಾಲಂನಲ್ಲಿ ಬರಲಿಲ್ಲ ಎಂದರೆ ಸರಿಯಲ್ಲ. ಸದರಿ ಮುಟೇಷನ್ ತಪ್ಪು ಇರುತ್ತದೆ ಎಂದು ಎಲ್ಲೂ ಪ್ರಶ್ನಿಸಿರುತ್ತೀರಾ ಅಂತ ಕೇಳಲು ಸಾಕ್ಷಿ ಅದು ತಪ್ಪೇನಿಲ್ಲಾ ಎಂದು ನುಡಿಯುತ್ತಾರೆ. 1963-64 ರಿಂದ 2001-02 ರವರೆಗೆ ಅಂಬುಜಮ್ಮ ಕಬ್ಜೆಯಲ್ಲಿ ಇಲ್ಲವೇ ಇಲ್ಲ ಎಂದರೆ ಸರಿಯಲ್ಲ. 1963-64 ರಲ್ಲಿ ಬಸಪ್ಪ ತಂದೆ ಮಲ್ಲಪ್ಪ ಚಂದಾ ಇವರ ಹೆಸರು ಇತ್ತು ಎಂದರೆ ಸಾಕ್ಷಿ ಅವರೇ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ರಾಚಪ್ಪ ಚಂದಾ ಈತನ ಹೆಸರಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿಯವನು 1967-68 ರಿಂದ 2001-02 ರವರೆಗೆ ಕಬ್ಜದಲ್ಲಿ ಇದ್ದನು ಅಂತ ನಮೂದು ಇದೆ ಎಂದರೆ ಸರಿಯಲ್ಲ. ಅಂಬುಜಮ್ಮ ಕಬ್ಜೆಯಲ್ಲಿ ಬಂದ ಬಗ್ಗೆ ಮುಟೇಷನ ಆಗಿರುತ್ತದೆ. ಸದರಿ ಮುಟೇಷನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆದನ್ನು ತೋರಿಸಿದರೆ ನನಗೆ ಗೊತ್ತಾಗುವುದಿಲ್ಲ.

**09.** ಅಂಬುಜಮ್ಮ ತೀರಿಕೊಂಡ ಮೇಲೆ ಜಮೀನಿಗೆ ಸಂಬಂಧಿಸಿದ ಪಹಣಿಗಳನ್ನು

ಪಡೆದುಕೊಂಡಿರುತ್ತೀರಾ ಎಂದರೆ ನಾನು ತೆಗೆದುಕೊಂಡಿರುವುದಿಲ್ಲ. ಸದರಿ ದಾಖಲೆಗಳನ್ನು ಪ್ರತಿ ವರ್ಷ ತೆಗೆದುಕೊಂಡ ಬಗ್ಗೆ ನನ್ನ ಗಂಡನಿಗೆ ಗೊತ್ತು. ಎಸ್.ಬಿ.ಐ ಬ್ಯಾಂಕ ಹೈದರಾಬಾದನಲ್ಲಿ ಸದರಿ ಆಸ್ತಿ ಅಡಮಾನ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವೆಂಕಟರಾವ್, ಅಂಬುಜಮ್ಮ ಮತ್ತು ರಾಚಪ್ಪ ಚಂದಾ ಇವರೆಲ್ಲರೂ ಸೇರಿ ಒಂದು ಒಪ್ಪಂದ ಮಾಡಿಕೊಂಡು ಅಂಬುಜಮ್ಮನ ಹೆಸರನ್ನು ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರೆಲ್ಲರೂ ಸೇರಿ 1 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂಗತಿ ನನ್ನ ಗಂಡನಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ಗಂಡ 1963-64 ರಿಂದ 2001-02 ರವರೆಗೆ ನಾನು ಕಬ್ಜಯಲ್ಲಿ ಇಲ್ಲ ಎಂದು ಒಪ್ಪಿಕೊಂಡಿದ್ದನು ಎಂದರೆ ಸರಿಯಲ್ಲ.

**10.** ದಾವಾ ಜಮೀನನ್ನು ನಾನು ನೋಡಿರುತ್ತೇನೆ. ದಾವೆ ಎರಡು ಜಮೀನುಗಳ ಮೇಲೆ ಇರುತ್ತವೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ 2 ನೇ ವ್ಯಾಕ್ಯವೃಂದದಲ್ಲಿ ಸರ್ವೆ ನಂ.101 ಮತ್ತು 102 ಎಂದು ನಮೂದಿಸಲಾಗಿದೆ ಎಂದರೆ ನಿಜ. ಸರ್ವೆ ನಂ.101 ವಿಸ್ತೀರ್ಣ 04 ಎಕರೆ 6 ಗುಂಟೆ ಇರುತ್ತದೆ. ಸದರಿ ಜಮೀನಿನ ಪೂರ್ವಕ್ಕೆ-ಪಶ್ಚಿಮಕ್ಕೆ ಮತ್ತು ಉತ್ತರ-ದಕ್ಷಿಣಕ್ಕೆ ಯಾರ ಜಮೀನುಗಳು ಇರುತ್ತದೆ ಎಂದು ನನಗೆ ನನಪಿಲ್ಲ. ದಾವಾ ದಾಖಲೆಸುವ ಸಮಯದಲ್ಲಿ ಸಹ ನನಗೆ ಚಕಬಂದಿ ನೆನಪಿರಲಿಲ್ಲ.

**11.** ಸರ್ವೆ ನಂ.97 ಯಾರ ಹೆಸರನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.107 ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಸರ್ವೆ ನಂ.95 ಮತ್ತು 103 ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಸರ್ವೆ ನಂ.101 ಜಮೀನು ಅಂಬುಜಮ್ಮನ ಹೆಸರಿನಲ್ಲಿ ಇರುತ್ತದೆ. ದಾವೆಯ ವಾಕ್ಯವೃಂದ 2 ರಲ್ಲಿ ತೋರಿಸಿದ

ಚಕಬಂದಿ ಸುಳ್ಳು ಇರುತ್ತದೆ, ಖರೀದಿ ಪತ್ರದಲ್ಲಿ ಇರುವ ಚಕಬಂದಿಯನ್ನು ವಾದಪತ್ರದಲ್ಲಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

**12.** ದಾವಾ ಆಸ್ತಿಗಳು ಪ್ರಜ್ವಲನ ತಾಯಿಯಾದ ಜಾನಸಿಬಾಯಿ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಾಮಪ್ಪನು ಕಬ್ಜೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರಾಮಪ್ಪ ನಾಯಕ ಈ ದಿನ ನ್ಯಾಯಾಲಯದಲ್ಲಿ ಇರುತ್ತಾನೆ. ಸದರಿಯವನು ಎಷ್ಟು ವರ್ಷಗಳಿಂದ ಕಬ್ಜೆಯಲ್ಲಿ ಇರುತ್ತಾನೆ ಎಂದರೆ ನನಗೆ ನೆನಪಿರುವುದಿಲ್ಲ. ಸಾಕ್ಷಿ ಮುಂದುವೆದು ಅವರಿಗೆ ನೋಡಿಕೊಳ್ಳಲು ಕೊಟ್ಟಿರುತ್ತೇನೆ. ರಾಮಪ್ಪ ನಾಯಕನು ಕಬ್ಜೆ ಇರುವುದಿಲ್ಲ, ನಾವು ನೋಡಿಕೊಳ್ಳಲು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯೇ ಮಾಲೀಕ ಆತನೇ ಕಬ್ಜೆಯಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ರಾಮಪ್ಪ ನಾಯಕನೇ ನೋಡಿಕೊಳ್ಳುತ್ತಾನೆ ಎಂದು ನಾನು ದಾವೆಯಲ್ಲಿ ಬರೆಸಿರಬಹುದು. ಸದರಿ ದಾವೆ ಆಸ್ತಿಯಲ್ಲಿ ಮೊದಲು 1 ನೇ ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜದಾರ ಇದ್ದು, ಆತನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ, ಅದ್ದರಿಂದ 2 ನೇ ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜೆದಾರ ಇರುತ್ತಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಜಮೀನನ್ನು ಯಾರು ಕೊಟ್ಟರು ಅಂತ ಕೇಳಲು ಸಾಕ್ಷಿ ರಾಮಾನುಜಂ ವೆಂಕಟರಾವಗೆ ಕೊಟ್ಟಿರುತ್ತಾನೆ. ರಾಮಾನುಜಂ ಈತನು ವೆಂಕಟರಾವನಿಗೆ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಸದರಿ ಸಂಗತಿಯನ್ನು ದಾವೆಯಲ್ಲಿ ಬರೆಸಿರುತ್ತೇವೆ. ರಾಮಾನುಜಂ ವೆಂಕಟರಾವ್‌ನಿಗೆ ಯಾಕೆ ಕೊಟ್ಟನು ಅಂತ ಕೇಳಲು ಸಾಕ್ಷಿ ಮುರಳಿಧರ ಈತನು ವೆಂಕಟರಾವಗೆ ನೋಡಿಕೊಳ್ಳಲು ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಆ ರೀತಿ ಕಾಗದ ಮಾಡಿಕೊಟ್ಟಿರುತ್ತಾರ ಎಂದು ಕೇಳಲು ಇರಬಹುದು ಎಂದು ನುಡಿಯುತ್ತಾರೆ. ಹಾಗೆ ಕೊಟ್ಟು 12-15 ವರ್ಷಗಳು ಆಗಿರಬಹುದು.

**13.** ಮುರಳಿಧರ 2005 ರಲ್ಲಿ ತೀರಿಕೊಂಡಿರುತ್ತಾನೆ. ಮುರಳಿಧರರಾವ್ ಈತನು ವೆಂಕಟರಾವಗೆ ನೋಡಿಕೊಳ್ಳಲು ಎಂದೂ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವೆಂಕಟರಾವ ಈತನು ಖರೀದಿ ಪತ್ರವಾದ ನಂತರವೇ ಸುರಪುರಕ್ಕೆ ಬಂದಿರುತ್ತಾನೆ, ಅದಕ್ಕಿಂತ ಮುಂಚೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವೆಂಕಟರಾವ ರಾಯಚೂರಿನಲ್ಲಿ ಇದ್ದನು ಎಂದು ನುಡಿಯುತ್ತಾರೆ.

**14.** ಈಗ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದೇವೆ. ನಾವು 20 ವರ್ಷಗಳಿಂದ ಭತ್ತ ಬೆಳೆಯುತ್ತಿದ್ದೇವೆ. ಸದರಿ ಜಮೀನಿಗೆ ಪೈಪಲೈನ ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನನ್ನು ಯಾರು ಸಮನಾಗಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನಿ ನದಿಗೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ಭತ್ತದ ಬೆಳೆಗೆ ನದಿಯ ನೀರನ್ನು ತೆಗೆದುಕೊಳ್ಳಲಾಗುತ್ತದೆ ಎಂದರೆ ಸರಿ. ಸದರಿ ನೀರು ತೆಗೆದುಕೊಳ್ಳಬೇಕಾದರೆ ಪೈಪಲೈನ ಬೇಕು ಎಂದರೆ ಸರಿ. ಸದರಿ ಪೈಪಲೈನಗೆ ನದಿಗೆ ಹೊಂದಿಕೊಂಡು ಮೋಟಾರು ಇದೆ ಎಂದರೆ ಸರಿ. ಸದರಿ ಮೋಟರು ಮೊದಲು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದು, ನಂತರ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಖರೀಸಿದ ನಂತರ ದಾವಾ ಆಸ್ತಿಯನ್ನು ಸಮನಾಗಿ ಮಾಡಿ ಪೈಪಲೈನ ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ಅಂಬುಜಮ್ಮನ 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾಳೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಿಂಧನೂರು ಇರುವುದರಿಂದ ತನಗೆ ಬಹಳಷ್ಟು ಹೊಲಗಳುಇರುವುದರಿಂದ ಸದರಿ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಅಂಬುಜಮ್ಮ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ

1 ನೇ ಪ್ರತಿವಾದಿ ಕಬ್ಜೆಯಲ್ಲಿ ಇದ್ದನು, 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಆತನೇ ಮಾಲೀಕ ಮತ್ತು ಕಬ್ಜೆದಾರ ಇರುತ್ತಾನೆ ಎಂದರೆ ಸರಿಯಲ್ಲ. ನಾವು ಎಂದೂ ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಅಂಬುಜಮ್ಮನಾಗಲಿ, ನಾನಗಲಿ, ನನ್ನ ಗಂಡನಾಗಲಿ ಎಂದೂ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಕೀಲರ ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು)**

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.

**ಮದ್ಯಾಹ್ನ 4 ಗಂಟೆಗೆ ಪ್ರಕರಣವನ್ನು ಕೂಗಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ.ಕೆ ವಕೀಲರಿಂದಃ**

**15.** ನನಗೆ ಇಂಗ್ಲೀಷ್ ಸ್ವಲ್ಪ ಸ್ವಲ್ಪ ಬರುತ್ತದೆ. ನಾನು ತೆಲುಗಿನಲ್ಲಿ ಹೆಚ್.ಎಸ್.ಸಿ ಓದಿರುತ್ತೇನೆ, ಅಲ್ಲಿ ಒಂದು ವಿಷಯ ಇಂಗ್ಲೀಷ ಇರುತ್ತದೆ. ದಾವಾಪತ್ರದಲ್ಲಿರುವ ಮಾಹಿತಿಯನ್ನು ವಕೀಲರ ಮುಖಾಂತರ ತಿಳಿದುಕೊಂಡಿರುತ್ತೇನೆ. ವಾದಪತ್ರ ವಾಕ್ಯವೃಂದ 13 ರಲ್ಲಿ ಒಂದು ಎಕರೆಗೆ 10 ಚೀಲ ಭತ್ತಕ್ಕೆ ರಂತೆ ಲೀಜ್‌ಗೆ ಕೊಟ್ಟಿರುತ್ತೇನೆ ಎಂದು ಬರೆಸಿರುವುದು ಸರಿ ಇರುತ್ತದೆ. ಯಾವ ತಾರೀಖು, ವರ್ಷದಿಂದ ಯಾವ ತಾರೀಖು ವರ್ಷದವರೆಗೆ ಲೀಜಗೆ ಕೊಟ್ಟಿರುತ್ತೇವೆ ಎಂದು ವಾದಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ನಿಜ. ಸದರಿ ವ್ಯವಹಾರ ಲಿಖಿತ ರೂಪಾದಲ್ಲಿ ಆಗಿರುತ್ತದೆ. ಸದರಿ ಲೀಜ್ ಕೊಡುವ ಸಮಯದಲ್ಲಿ ಯಾರು ಯಾರು ಇದ್ದರು ಅಂತ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡ ತೀರಿಕೊಂಡ ನಂತರ ನನ್ನ ಹಾಗೂ ವೆಂಕಟರಾವ್ ನಡುವೆ ಯಾವುದೇ ಲೀಜ್ ವ್ಯವಹಾರ ಆಗಿರುವುದಿಲ್ಲ. ಸದರಿ ಸಂಗತಿಯ ಬಗ್ಗೆ ಊರಲ್ಲಿ ಯಾರಿಗೆ ಮಾಹಿತಿ ಇದ್ದ ಬಗ್ಗೆ ನನಗೆ

ಗೊತ್ತಿರುವುದಿಲ್ಲ. ಲೀಜ್ ತೆಗೆದುಕೊಂಡ ಬಗ್ಗೆ ರಶೀದಿ ಇರುವುದಿಲ್ಲ. ನನ್ನ ಗಂಡ ಮತ್ತು 1 ನೇ ಪ್ರತಿವಾದಿಯರ ಮಧ್ಯ ಯಾವುದೇ ಲೀಜ್ ಆಗಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಲೀಜ್‌ನಲ್ಲಿ ಕೊಟ್ಟಿದ್ದೇವೆ ಎಂದು ಬರೆದಿದ್ದೇವೆ ಎಂದರೆ ಸರಿಯಲ್ಲ. ನಾವು ಕಬ್ಜೆಯಲ್ಲಿ ಇಲ್ಲದೇ ಇರುವುದರಿಂದ ದಾವಾ ಆಸ್ತಿಯ ಸ್ವಾಧೀನ ಕೋರಬೇಕಾಗುತ್ತದೆ ಎಂದು ಸುಳ್ಳು ಸಂಗತಿಯನ್ನು ಸೃಷ್ಟಿಸಿಕೊಂಡು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡನಾಗಲಿ, ನಾನಾಗಲಿ 1 ನೇ ಪ್ರತಿವಾದಿಯ ಮುಖ ನೋಡಿಲ್ಲ, ಲೀಜ್ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**16.** ಅಂಬುಜಮ್ಮ ತೀರಿಕೊಂಡ ನಂತರ ನಾನಗಲಿ, ನನ್ನ ಗಂಡನಾಗಲಿ ನಮ್ಮ ಹೆಸರಿಲ್ಲಿ ಮುಟೇಷನ ಮಾಡಲು ಅರ್ಜಿ ಕೊಟ್ಟಿರುವುದಿಲ್ಲ. ನನ್ನ ಗಂಡ ತೀರಿಕೊಂಡ ನಂತರ ನಾನು 2019 ರಲ್ಲಿ ಅರ್ಜಿ ಕೊಟ್ಟಿರುತ್ತೇನೆ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಅರ್ಜಿಯ ಪ್ರಕಾರ ನಮ್ಮ ಹೆಸರಿನಲ್ಲಿ ಮುಟೇಷನ ಆಗಿರುವುದಿಲ್ಲ, ಆ ಕಾರಣಕ್ಕಾಗಿ ದಾವೆ ಹಾಕಿರುತ್ತೇವೆ. ಸದರಿ ಅರ್ಜಿಯ ಮೇಲೆ ಯಾವುದೇ ಆದೇಶ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ನಾವು ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ವೆಂಕಟರಾವ ಮತ್ತು ಪ್ರಜ್ವಲ ಹೆಸರಿನಲ್ಲಿ ದಾಖಲಿರುವ ಬಗ್ಗೆ ನನಗೆ 2018 ರಲ್ಲಿ ಗೊತ್ತಾಗಿರುತ್ತದೆ. ಸದರಿ ದಾಖಲೆಯಲ್ಲಿ ತಪ್ಪಾಗಿ ದಾಖಲಾಗಿದೆ ಎಂದು ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ನಾನು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದೆನೆ ಎಂದು ತೋರಿಸಲು ಸರಕಾರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಗಂಡನಾಗಲಿ ಅಥವಾ ಮುರಳಿಧರನಾಗಲಿ ಅಥವಾ ನಾನಾಗಲಿ ದಾವಾ ಆಸ್ತಿಗೆ ಸಂಬಂಧಿದಂತೆ ಕಂದಾಯ ಪಾವತಿ ಮಾಡಿದ ಬಗ್ಗೆ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ.

**17.** ವಾದಪತ್ರದ ವಾಕ್ಯವೃಂದ 14 ರಲ್ಲಿ ಅಂಬುಜಮ್ಮ ಮತ್ತು ಯಾರೋ ಎಂದು

ಬೆರಸಿದ್ದೀರಿ ಎಂದರೆ ಸಾಕ್ಷಿ ಅದನ್ನು ನಾನು ಬರೆಸಿಲ್ಲ ಎಂದು ನುಡಿಯುತ್ತಾರೆ. ಅಂಬುಜಮ್ಮ ಎಂದು ಹೇಳಿ ಯಾರು ಖರೀದಿ ನೋಂದು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವೆ ಹಾಕಿದ ನಂತರವೂ ಯಾರು ಬಂದು ನೋಂದು ಮಾಡಿಕೊಟ್ಟರು ಅಂತ ಕೇಳಿ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೀರಾ ಎಂದರೆ ನನಗೆ ನೆನಪಿರುವುದಿಲ್ಲ. ಬೇರೆಯಾರು ನೋಂದು ಮಾಡಿಕೊಟ್ಟಿಲ್ಲ, ಸ್ವತಃ ಅಂಬುಜಮ್ಮನೇ ಬಂದು ನೋಂದು ಮಾಡಿಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ.

**18.** ಅಂಬುಜಮ್ಮ ತೀರಿಕೊಂಡ ದಿನ ನಾನು ಮತ್ತು ನನ್ನ ಗಂಡ ಸುರಪುರಕ್ಕೆ ಬಂದಿದ್ದೇವು. ನಾವು ಬಂದ ದಿನ ಸುರಪುರದಲ್ಲಿ ಯಾರು ಯಾರು ಸೇರಿದ್ದರು ಎಂದು ಹೆಸರು ಗೊತ್ತಿರುವುದಿಲ್ಲ, ಆದರೆ ಎಲ್ಲರೂ ಬಂದಿದ್ದರು ಎಂದು ನುಡಿಯುತ್ತಾರೆ. ನಮ್ಮ ಸಂಬಂಧಿಕರ ಪೈಕಿ ಯಾರು ಯಾರೋ ಬಂದಿದ್ದರು ಈಗ ನನಗೆ ನೆನಪಿರುವುದಿಲ್ಲ. ಯಾರು ಯಾರು ಸೇರಿದ್ದರು ನನಗೆ ನೆನಪಿರುವುದಿಲ್ಲ. ಅಂಬುಜಮ್ಮನ ಅಂತ್ಯಸಂಸ್ಕಾರ ಸುರಪರದಲ್ಲಿ ಆಗಿರುತ್ತದೆ, ಆದರೆ ಯಾವ ಸ್ಥಳದಲ್ಲಿ ಆಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಅಂಬುಜಮ್ಮ ಸುರಪುರದಲ್ಲಿ ತೀರಿಕೊಂಡಿಲ್ಲ, ನಾನು ನನ್ನ ಗಂಡ ಸುರಪುರದಲ್ಲಿ ಅಂತ್ಯಸಂಸ್ಕಾರಕ್ಕೆ ಬಂದಿರುವುದಿಲ್ಲ, ಸದರಿಯವಳು ಹೈದರಾಬಾದನಲ್ಲಿ ತೀರಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಬುಜಮ್ಮನೇ ಬಂದು 1 ನೇ ಪ್ರತಿವಾದಿಗೆ ಖರೀದಿ ಪತ್ರ ನೋಂದು ಮಾಡಿಕೊಟ್ಟಿರುತ್ತಾಳೆ, ಸದರಿ ಸಂಗತಿ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವಾಗಲಿ, ಮುರಳಿಧರವಾಗಲಿ ದಾವಾ ಆಸ್ತಿಯ ಕಬ್ಜದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.